ಈಶಾನ್ಯ ಸೀಮೆಯ ಸಾಂಸ್ಕೃತಿಕ ಸಂಭ್ರಮವನ್ನು ಮಣಿಪುರದ ಹೋಳಿ ಬಿಂಬಿಸುತ್ತದೆ. ಐದು ದಿನಗಳ ಈ ಹಬ್ಬ ಜನಪದ ಮತ್ತು ಬುಡಕಟ್ಟು ಜನಾಂಗದ ಅನನ್ಯ ಬದುಕನ್ನು ಬಿಂಬಿಸುತ್ತದೆ.



# ಮಣಿಪುರದ ಹೋಳಿ ಯಾವೋಶಾಂಗ್ ಹೇಗಿದೆ ಗೊತ್ತೆ?

■ ಸುರೇಂದ್ರ ಪೈ, ಭಟ್ಕಳ



ನೈಸರ್ಗಿಕ ಸೌಂದರ್ಯ ಮತ್ತು ಶ್ರೀಮಂತ ಪರಂಪರೆಯಿಂದ ತುಂಬಿರುವ ಸುಂದರವಾದ ಈಶಾನ್ಯ ರಾಜ್ಯಗಳಲ್ಲಿ ಮಣಿಪುರವೂ ಒಂದು. ಇದರ ಶ್ರೀಮಂತ ಸಂಸ್ಕೃತಿ ಮತ್ತು ಸಂಪ್ರದಾಯಗಳು ಯಾವಾಗಲೂ ಪ್ರವಾಸಿಗರನ್ನು ರಾಜ್ಯದ ಸೌಂದರ್ಯವನ್ನು ವೀಕ್ಷಿಸಲು ಆಕರ್ಷಿಸುತ್ತವೆ. ಅವುಗಳಲ್ಲಿ ವಸಂತ ಮಾಸದ ಪ್ರಾರಂಭದಲ್ಲಿ ಆಚರಿಸಲಾಗುವ 'ಮಣಿಪುರದ ಹೋಳಿ' ಎಂದೇ ಖ್ಯಾತಿವೆತ್ತ 'ಯಾವೋಶಾಂಗ್ ಹಬ್ಬ' ವಿಶೇಷವಾದದ್ದು.

ಮಣಿಪುರದ ಮೈತೆಯಿ ಬುಡಕಟ್ಟು ಜನಾಂಗದವರು ಹೋಳಿ ಹಬ್ಬವನ್ನು ಐದು ದಿನಗಳ ಕಾಲ 'ಯಾವೋಶಾಂಗ್' ಎಂದು ಆಚರಿಸುತ್ತಾರೆ. ಮಣಿಪುರದ ಪ್ರಮುಖ ಹಬ್ಬಗಳಲ್ಲಿ ಈ 'ಯಾವೋಶಾಂಗ್ ಹಬ್ಬ' ಒಂದಾಗಿದ್ದು ವಿವಿಧ ಸಮುದಾಯಗಳ ಜನರು ಒಟ್ಟಾಗಿ ಆಚರಣೆಯಲ್ಲಿ ಭಾಗವಹಿಸುತ್ತಾರೆ. ಈ ಹೋಳಿ ಹಬ್ಬವನ್ನು ವೈಷ್ಣವ (ಕೃಷ್ಣ ಭಕ್ತರು) ಸಂಪ್ರದಾಯದಡಿಯಲ್ಲಿ ಆಚರಿಸಲಾಗುತ್ತಿದ್ದು, ಈ ಧರ್ಮವನ್ನು ರಾಜ ಭಾಗ್ಯಚಂದ್ರ 18ನೇ ಶತಮಾನದಲ್ಲಿ ಮಣಿಪುರಕ್ಕೆ ಪರಿಚಯಿಸಿದನು.

ಲ್ಯಾಮ್ಟಾ ತಿಂಗಳ ಹುಣ್ಣಿಮೆಯ ದಿನದಂದು (ಫೆಬ್ರುವರಿ–ಮಾರ್ಚ್) ಆಚರಿಸುವ ಐದು ದಿನಗಳ ಈ ಹಬ್ಬವನ್ನು ಸಾಮಾನ್ಯವಾಗಿ ಹೋಳಿ ಹಬ್ಬದಂತೆಯೇ ಆಚರಿಸಲಾಗುತ್ತದೆ. ಇದು ಕೇವಲ ಬಣ್ಣಗಳೊಂದಿಗೆ ಆಚರಿಸುವ ಹೋಳಿ ಹಬ್ಬವಲ್ಲ. ಬದಲಾಗಿ ಈ ಹಬ್ಬವನ್ನು ಹಾಡುಗಾರಿಕೆ, ನೃತ್ಯ ಮತ್ತು ಇತರ ಅನೇಕ ಸಾಂಪ್ರದಾಯಿಕ ಪ್ರದರ್ಶನಗಳೊಂದಿಗೆ ಆಚರಿಸಲಾಗುತ್ತದೆ. ಇದನ್ನು ಲಿಂಗ ಮತ್ತು ವಯಸ್ಸಿನ ಭೇದ ಇಲ್ಲದೆ ಎಲ್ಲರೂ ಉತ್ಸಾಹದಿಂದ ಆಚರಿಸುತ್ತಾರೆ.

ಐದು ದಿನಗಳ ಕಾಲ ನಡೆಯುವ ಈ ಆಚರಣೆಯು ಮೊದಲ ದಿನ 'ಯಾವೋಶಾಂಗ್ ಮೇ ಥಾಬಾ' ಅಥವಾ ಒಣಹುಲ್ಲಿನ ಗುಡಿಸಲನ್ನು ಸುಡುವುದರೊಂದಿಗೆ ಪ್ರಾರಂಭವಾಗುತ್ತದೆ. ಇದು ಮೈತೆಯಿ ತಿಂಗಳ ಲ್ಯಾಮ್ಟಾ (ಚಂದ್ರನ ಕ್ಯಾಲೆಂಡರ್, ಫೆಬ್ರುವರಿ/ಮಾರ್ಚ್) ಹುಣ್ಣಿಮೆಯ ರಾತ್ರಿ ದುಷ್ಟಶಕ್ತಿಗಳ ನಾಶವನ್ನು ಸಂಕೇತಿಸುತ್ತದೆ. ಹುಲ್ಲು ಮತ್ತು ಬಿದಿರಿನಿಂದ ಮಾಡಿದ ಗುಡಿಸಲಿನಲ್ಲಿ ಶ್ರೀಕೃಷ್ಣ ಅಥವಾ ಚೈತನ್ಯ ಮಹಾಪ್ರಭುಗಳ ಸಣ್ಣ ವಿಗ್ರಹವನ್ನು ಇರಿಸಿ, ಹಣ್ಣು ಮತ್ತು ಇತರ ಖಾದ್ಯಗಳನ್ನು ಅರ್ಪಿಸಿ ಪೂಜಿಸಲಾಗುತ್ತದೆ. ನಂತರ